# ಕರ್ನಾಟಕ ವಿಧಾನ ಪರಿಷತ್ತು

1. ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ

2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 548

3. ಉತ್ತರಿಸಬೇಕಾದ ದಿನಾಂಕ : 11-12-2020

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2020-21ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೋವಿಡ್-19ರ ಹಿನ್ನಲೆಯಲ್ಲಿ ಬಡವರಿಗೆ ಕೂಲಿ ನೀಡುವ ಯೋಜನೆಯಡಿಯಲ್ಲಿ ಪಂಚಾಯತಿವಾರು ಕ್ರಿಯಾ ಯೋಜನೆಯ ರೂಪಿಸಲಾಗಿದೆಯೇ; ರೀಪಿಸಿದ್ದಲ್ಲಿ, ತಾಲ್ಲೂಕುವಾರು ಮತ್ತು ಪಂಚಾಯತಿವಾರು ಎಷ್ಟು ಮೊತ್ತದವರೆಗೆ ಕ್ರಿಯಾ ಯೋಜನೆ ತಯಾರಿಸಿದೆ; (ವಿವರ ನೀಡುವುದು) | ಕೋವಿಡ್-19 ಹಿನ್ನಲೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 251 ಉಖಾಯೋ 2018, ದಿನಾಂಕ: 26-03-2020 ರಂತೆ ಗ್ರಾಮ ಪಂಚಾಯತಿ ಕ್ರಿಯಾಯೋಜನೆಯಲ್ಲಿ ಸೇರ್ಪಡೆಗೊಳ್ಳದಿದ್ದರೂ ಅರ್ಹ ಕಾಮಗಾರಿಗಳನ್ನು ಪ್ರಾರಂಭಿಸಿ, ತದನಂತರ ಘಟನೋತ್ತರ ಮಂಜೂರಾತಿ ಪಡೆಯುವಂತೆ ಸೂಚಿಸಲಾಗಿದೆ. ಅದರಂತೆ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಗ್ರಾಮ ಪಂಚಾಯತಿಗಳು ಕ್ರಮವಹಿಸಿದ್ದು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಕೂಲಿಕಾರ್ಮಿಕರಿಗೆ ಕೆಲಸ ನೀಡಲಾಗಿದೆ. |
| ಆ) | ಹಾಗಿದ್ದಲ್ಲಿ, ನಾಗಮಂಗಲ ತಾಲ್ಲೂಕಿನಲ್ಲಿ ಈವರೆವಿಗೂ ಈ ಸಂಬಂಧ ಕ್ರಿಯಾ ಯೋಜನೆ ಅನುಷ್ಠಾನ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅನ್ವಯಿಸುವುದಿಲ್ಲ. |
| ಇ) | 2020-21ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ನಾಗಮಂಗಲ ತಾಲ್ಲೂಕಿನಲ್ಲಿ ಈವರೆವಿಗೂ ಯಾವ ಯಾವ ಚಾಲ್ತಿಯಲಿವೆ; (ವಿವರ ನೀಡುವುದು) | 2020-21ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ನಾಗಮಂಗಲ ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳ ವಿವರಗಳನ್ನು ***ಅನುಬಂಧ-1*** ಎಂದು ಗುರುತಿಸಿ ಲಗತ್ತಿಸಿದೆ. |
| ಈ) | ನಾಗಮಂಗಲ ತಾಲ್ಲೂಕಿನ ದೇವಲಾಪುರ ಹೋಬಳಿ ಲಕ್ಕೇಗೌಡನಕೊಪ್ಪಲಿನಿಂದ ದೊಂದೆಮಾದಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಯಾವ ಯೋಜನೆಯಲ್ಲಿ ಮಂಜೂರಾಗಿದೆ; ಸದರಿ ಕಾಮಗಾರಿಯನ್ನು ಯಾರು ನಿರ್ವಹಿಸುತ್ತಿದ್ದಾರೆ ಮತ್ತು ಯಾವ ಹಂತದಲ್ಲಿದೆ; | ನಾಗಮಂಗಲ ತಾಲ್ಲೂಕಿನ ದೇವಲಾಪುರ ಹೋಬಳಿ ಲಕ್ಕೇಗೌಡನಕೊಪ್ಪಲಿನಿಂದ ದೊಂದೆಮಾದಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಒಟ್ಟು 7.01 ಕಿ.ಮೀ ಉದ್ದವಿದ್ದು, ಪಂ.ರಾ.ಇಂ.ವಿಭಾಗ ವತಿಯಿಂದ ಆರ್.ಐ.ಡಿ.ಎಫ್.24 ಯೋಜನೆಯಡಿ ರೂ.200.00 ಲಕ್ಷಗಳಿಗೆ 0.66 ಕಿ.ಮೀ ಸರಪಳಿಯಿಂದ 4.46 ಕಿ.ಮೀ ಸರಪಳಿವರೆಗೆ ಒಟ್ಟು 3.80 ಕಿ.ಮೀ ಉದ್ದಕ್ಕೆ ರಸ್ತೆಯನ್ನು ಡಾಂಬರೀಕರಣ ಮಾಡಲು ಅನುಮೋದನೆಯಾಗಿರುತ್ತದೆ. ಸದರಿ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಶ್ರೀ ಶಂಭು ಕನ್ಸ್ಟ್ರಕ್ಷನ್, ಶ್ರೀ ಬಿ.ಆರ್. ರಾಮಚಂದ್ರ, 1 ನೇ ದರ್ಜೆ ಗುತ್ತಿಗೆದಾರರು, ರಿ.ನಂ:6869/2017-18, ಬೊಮ್ಮನಹಳ್ಳಿ, ಮುದಗಂದೂರು ಅಂಚೆ, ದುದ್ದ ಹೋಬಳಿ, ಮಂಡ್ಯ ಜಿಲ್ಲೆ ರವರಿಗೆ ವಹಿಸಲಾಗಿದ್ದು, ಪ್ರಸ್ತುತ ಜಲ್ಲಿ ಬಿಚಾವಣೆ ಕೆಲಸ ಮುಗಿದ್ದು (ಗ್ರೇಡ್-1, ಗ್ರೇಡ್-2) ಡಾಂಬರು ಕೆಲಸ ಮಾಡಬೇಕಾಗಿದ್ದು ಒಟ್ಟಾರೆ ಇದುವರೆವಿಗೂ ರೂ.149.50 ಲಕ್ಷಗಳಿಗೆ ವೆಚ್ಚ ಭರಿಸಲಾಗಿರುತ್ತದೆ. |

| | | |
|---|---|---|
| ಉ) | ಇದೇ ಕಾಮಗಾರಿ ಕಾಡಾ ಯೋಜನೆಯಿಂದಲೂ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಒಂದೇ ಕಾಮಗಾರಿಗೆ ಎರಡು ಇಲಾಖೆಗಳಿಂದ ಕಾಮಗಾರಿ ಮಂಜೂರು ಮಾಡಿರುವ ಇಲಾಖಾ ಅಧಿಕಾರಿಗಳು ಮತ್ತು ನಿರ್ವಹಿಸುತ್ತಿರುವ ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ? | ಇದೇ ರಸ್ತೆಗೆ ಕಾಡಾ ಇಲಾಖಾ ವತಿಯಿಂದ ಸರಪಳಿ 4.50 ಕಿ.ಮೀ ಇಂದ 6.40 ಕಿ.ಮೀ ಯವರೆಗೆ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಲೆಕ್ಕಶೀರ್ಷಿಕೆ :4705 ರಲ್ಲಿ ರೂ. 52.20 ಲಕ್ಷಗಳಿಗೆ ಮಂಜೂರಾಗಿದ್ದು ಪ್ರಸ್ತುತ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸ ಬೇಕಾಗಿರುತ್ತದೆಂದು ಕಾಡಾ ಇಲಾಖೆಯ ಇಂಜಿನಿಯರ್ ರವರು ತಿಳಿಸಿರುತ್ತಾರೆ. |

ಸಂಖ್ಯೆ: ಗ್ರಾಅಪ 38(263) ಉಖಾಯೋ 2019

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
**ಪಂಚಾಯತ್ ರಾಜ್ ಸಚಿವರು**

# ಅನುಬಂಧ-1

| ಕ್ರ. ಸಂ | ಕಾರ್ಯಕ್ರಮ/ಯೋಜನೆಯ ಹೆಸರು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಷರಾ |
|---|---|---|---|---|
| 1 | 3054-ಸಿ.ಎಂ.ಜಿ.ಆರ್.ವೈ | 28 | 71.40 | ಕ್ರಿಯಾಯೋಜನೆಯನ್ನು ಅನುಮೋದನೆಗಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ರವರಿಗೆ ಸಲ್ಲಿಸಿದೆ. |
| 2 | 2702-ಸಣ್ಣ ನೀರಾವರಿ ಕೆರೆಗಳ ನಿರ್ವಹಣೆ/ದುರಸ್ಥಿ | 8 | 16.50 | |
| 3 | ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನ | 45 | 76.40 | |
| 4 | 15ನೇ ಹಣಕಾಸು ಯೋಜನೆ | 19 | 36.10 | |
| 5 | 3054-ಲಮ್ ಸಮ್/5054 | 32 | 1200.00 | ರೂ.800.00 ಲಕ್ಷಗಳ 32 ಕಾಮಗಾರಿಗಳಿಗೆ ಬದಲಾವಣೆ ಕಾಮಗಾರಿಗಳಾಗಿ ಸರ್ಕಾರದ ಆದೇಶ ಸಂ:ಗ್ರಾ.ಅ.ಪ:279-18/ ಆರ್.ಆರ್.ಸಿ.2020/ ದಿನಾಂಕ:30-11-2020. ರಂದು ಅನುಮೋದನೆ ಯಾಗಿರುತ್ತದೆ ಉಳಿದ ರೂ.400.00 ಲಕ್ಷಗಳ ಕಾಮಗಾರಿಗಳಿಗೆ ಅನುಮೋದನೆ ಯಾಗಿರುವುದಿಲ್ಲ |
| 6 | 4202-01-202-1-05-133-ವಿಶೇಷ ಅಭಿವೃದ್ಧಿ ಯೋಜನೆ-ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣ | 1 | 100.00 | ಟೆಂಡರ್ ಕರೆಯಬೇಕಾಗಿರುತ್ತದೆ |